



ಪ್ರಕರಣದ ತೀರ್ಪು ಅತ್ಯಂತ ಮಹತ್ವದ್ದಾಗಿದೆ. ಉತ್ತರಾಖಂಡ ರಾಜ್ಯದ ಸರ್ಕಾರವು 'Livin Relationship Certificate' ಅನ್ನು ಕಡ್ಡಾಯ ಮಾಡುವುದರೆಡೆಗೆ ಚಿಂತನೆ ನಡೆಸಿದೆ.

ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇರುವವರು ಮಕ್ಕಳನ್ನು ದತ್ತು ಪಡೆಯಲು ಸಾಧ್ಯವೇ ಎನ್ನುವ ಪ್ರಶ್ನೆಗೆ ಉತ್ತರವಾಗಿ ನಿಂತಿದೆ **Supriyo Vs. Union of India (2023)** ಎನ್ನುವ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪು. ಮಕ್ಕಳ ನ್ಯಾಯ ಕಾಯಿದೆ 2015 ಇದರಲ್ಲಿ ಈ ವಿಷಯದ ಬಗ್ಗೆ ಸ್ಪಷ್ಟತೆ ಇಲ್ಲದಿದ್ದರೂ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (CARA)ದ ನಿಯಮಾವಳಿಗಳ ಪ್ರಕಾರ ಮದುವೆಯಾಗಿ ಕನಿಷ್ಠ ಎರಡು ವರ್ಷಗಳು ಆಗಿರುವ ದಂಪತಿಗಳು ಮಾತ್ರ ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಅರ್ಹರು ಮತ್ತು ಒಂಟಿ ಹೆಂಗಸು ಹಾಗೂ ಒಂಟಿ ಗಂಡಸು ಏಕಪೋಷಕರಾಗಿ ಮಗುವನ್ನು ದತ್ತು ತೆಗೆದುಕೊಳ್ಳಲು ಅವಕಾಶವಿರುತ್ತದೆ. ಆದರೆ ಹೀಗೆ ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇರುವ ಇಬ್ಬರು ಕೂಡಿ ಮಗುವನ್ನು ದತ್ತು ತೆಗೆದುಕೊಳ್ಳುವುದರ ಬಗ್ಗೆ ಯಾವುದೇ ನಿಯಮವನ್ನು ನೇರ ಮತ್ತು ಖಚಿತವಾಗಿ ರೂಪಿಸಿಲ್ಲ. ಹಾಗಾಗಿ ಇಂತಹ ಸಂಬಂಧದಲ್ಲಿ ಇರುವ ಇಬ್ಬರು ಏಕಕಾಲಕ್ಕೆ ಒಟ್ಟಿಗೆ ಒಂದು ಮಗುವನ್ನು ದತ್ತು ಪಡೆಯುವ ಅವಕಾಶ ಸದ್ಯಕ್ಕಂತೂ ಇಲ್ಲ. ಅದರ ಬಗ್ಗೆ ಶಾಸಕಾಂಗ ಚರ್ಚೆಗೆ ಮೊದಲಿಟ್ಟು ಕಾನೂನಿನಲ್ಲಿ ವಿವರಣೆ ನೀಡಬೇಕಿದೆ.

ಲಿವಿನ್ ರಿಲೇಷನ್‌ಶಿಪ್‌ಗೆ ಕಾನೂನಿನ ಬೆಂಬಲ ಬೇಕು ಎನ್ನುವುದಾದರೆ ಮೂಲಭೂತವಾಗಿ ಅಂತಹ ಸಂಬಂಧ ಯಾವುದೇ ಒತ್ತಡವಿಲ್ಲದೆ ಹಾಗೂ ಆಮಿಷಕ್ಕೆ ಒಳಗಾಗದೆ ಏರ್ಪಟ್ಟಿರಬೇಕು. ಮದುವೆಯಾಗುವುದಾಗಿ ಪ್ರಮಾಣ ಮಾಡಿ ಸಂಗಾತಿಯೊಡನೆ ದೈಹಿಕ ಸಂಪರ್ಕ ಬೆಳೆಸಿದ್ದು ನಂತರ ಮದುವೆಯಾಗಲು ನಿರಾಕರಿಸಿದರೆ ಅದನ್ನು ಅತ್ಯಾಚಾರ ಎನ್ನಲಾಗುವುದಿಲ್ಲ ಬದಲಿಗೆ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 69ರ ಅಡಿಯಲ್ಲಿ ಅದನ್ನು ವಂಚನೆ ಎಂದು ಪರಿಗಣಿಸಿ 10 ವರ್ಷಗಳ ಜೈಲು ಶಿಕ್ಷೆಯನ್ನು ನೀಡಲಾಗುತ್ತದೆ. **'Sharing the bed does not entitle a person to gain authority on someone's life'** ಎಂದು ಹೇಳಿ ಸರ್ವೋಚ್ಚ ನ್ಯಾಯಾಲಯವು ಇಂತಹ ವಂಚನೆಯ ಮನೋಭಾವಕ್ಕೆ ಕಡಿವಾಣ ಹಾಕಲು ಯತ್ನಿಸಿದೆ. ಕಾರಣಾಂತರಗಳಿಂದ ಪರಸ್ಪರ ಒಪ್ಪಿಗೆಯಿಂದಲೇ ಲಿವಿನ್ ರಿಲೇಷನ್‌ಶಿಪ್‌ನಿಂದ ಹೊರ ಬಂದಿರಬಹುದಾದ ವ್ಯಕ್ತಿಗಳು ಮುಂದೆ ಮತ್ತೊಮ್ಮೆ ಅದೇ ಸಂಬಂಧದಲ್ಲಿ ಇರಲು ಬಯಸಿದರೆ ಅದಕ್ಕೆ ಕಾನೂನಿನ ವಿರೋಧ ಇರುವುದಿಲ್ಲ ಆದರೆ ಆ ಸಂಬಂಧದ ದೀರ್ಘಾವಧಿಯನ್ನು ಮೊದಲು ಇದ್ದ ಕಾಲದೊಡನೆ ಸೇರಿಸಿ ಲೆಕ್ಕ ಹಾಕಲು ಆಗುವುದಿಲ್ಲ. ಜಾತಿ ಧರ್ಮಗಳ ಅಂತರವಿಲ್ಲದೆ, ಲಾಂಗ್ ಡಿಸ್ಟೆನ್ಸ್‌ನಲ್ಲೂ ಕೂಡ ಇಂತಹ ಸಂಬಂಧದಲ್ಲಿ ಇರಬಹುದು.

ಸ್ವತಃ ಸರ್ವೋಚ್ಚ ನ್ಯಾಯಾಲಯವೇ ಲಿವಿನ್ ರಿಲೇಷನ್‌ಶಿಪ್ ಎನ್ನುವುದು ಸಮಾಜದ ಪ್ರತೀತಿಗೆ ಹೊಂದಾಣಿಕೆಯಾಗದಿದ್ದರೂ ಅದು ಅನೈತಿಕವೂ ಅಲ್ಲ ಕಾನೂನು ಬಾಹಿರವೂ ಅಲ್ಲ ಎಂದು ಹೇಳಿದೆ. ಆದರೆ ಒಂದೊಮ್ಮೆ ಪ್ರೀತಿ ಎನ್ನುವ ಹೆಸರಿನಿಂದ ಒಂದಾಗಿ, ಒಪ್ಪಿ ಜೊತೆಯಲ್ಲಿ ನಡೆಸುವ ಜೀವನ, 'ತನಗೆ ಬದುಕಲು ಬರುವುದಿಲ್ಲ, ನಿನ್ನನ್ನು ಬಾಳಲು ಬಿಡುವುದಿಲ್ಲ' ಎನ್ನುವ ಹಂತ ತಲುಪುತ್ತಿರುವುದರಿಂದ ಈ ಸಂಬಂಧವನ್ನು ಕಾನೂನಿನ ಚೌಕಟ್ಟಿನೊಳಗೆ ಪೂರ್ಣ ಪ್ರಮಾಣದಲ್ಲಿ ಹಿಡಿದು ಕೂರಿಸಲು ನ್ಯಾಯಾಂಗವೂ ತಿಣುಕಾಡುತ್ತಿದೆ.

ದೌರ್ಜನ್ಯದ ಅನುಭವಕ್ಕೆ ಸಿಕ್ಕ ದಾಂಪತ್ಯವು ಬೇರೆಯಾಗುವ ಮೊದಲು ಉಳಿದುಕೊಳ್ಳಲು ನೂರು ಪ್ರಯತ್ನ ನಡೆಸುತ್ತದೆ. ಅದಕ್ಕಿರುವ ಒಂದೇ ಕಾರಣ ವಿವಾಹ ಎನ್ನುವ ಬಂಧಕ್ಕೆ ಇರುವ ಸಾಮಾಜಿಕ ಮಾನ್ಯತೆ ಮತ್ತು ಸಾಮುದಾಯಿಕ ಉತ್ತರದಾಯಿತ್ವ ಎನ್ನುವ ಹೊಣೆ. ಆದರೆ ಸಾಮುದಾಯಿಕ ಬದ್ಧತೆ ಎನ್ನುವುದೇ ಇಲ್ಲದ ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಒಬ್ಬರಿಗೊಬ್ಬರು ಹೇಗೋ ಹೊಂದಿಕೊಂಡು ತೂಗುವ ಮಾತೆಲ್ಲಿ ಎನ್ನುವ ಅನುಮಾನ ಇರುವುದರಿಂದ ಮತ್ತು ಸಾಮಾಜಿಕ ಸಾಗುವಳಿಯಲ್ಲಿ ಕುಟುಂಬ ವ್ಯವಸ್ಥೆಗೆ ಇಂತಹ ಸಂಬಂಧಗಳು ಧಕ್ಕೆ ತರುತ್ತದೆ ಎನ್ನುವ ಊಹೆಯಿಂದ ಹಾಗೂ ನಮ್ಮಲ್ಲಿ ಮದುವೆ ಎನ್ನುವುದು ಇನ್ನೂ ಪ್ರತಿಷ್ಠೆಯ ಕುರುಹಾಗಿ ಉಳಿದಿರುವುದರಿಂದ ಇಂತಹ ಸಂಬಂಧವನ್ನು ಒಪ್ಪಿಕೊಳ್ಳಲು ಸಮಾಜವೂ ದ್ವಂದ್ವದಲ್ಲಿದೆ.

